# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2634 |
| ಸದಸ್ಯರ ಹೆಸರು | : | ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 24-03-2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಮುಖ್ಯಮಂತ್ರಿಯವರು |

****

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ, ಚಾಮರಾಜಸಾಗರ ಜಲಾಶಯದಲ್ಲಿ (ತಿಪ್ಪಗೊಂಡನಹಳ್ಳಿ) ಹೂಳು ಎತ್ತಲು ಜಲಾಶಯದ ನೀರನ್ನು ಖಾಲಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ತಿಪ್ಪಗೊಂಡನಹಳಿ ಜಲಾಶಯದಲ್ಲಿ ಹೂಳು ಎತ್ತಲು ಪೂರ್ಣ ಪ್ರಮಾಣದಲ್ಲಿ ನೀರನ್ನು ಖಾಲಿ ಮಾಡಿರುವುದಿಲ್ಲ. ಸುಮಾರು 30ಅಡಿ. ನೀರಿನಲ್ಲಿ Hydraulic Dredging ತಂತ್ರಜ್ಞಾನವನ್ನು ಬಳಸಿ ಹೂಳನ್ನು ತೆಗೆಯಲಾಗಿರುತ್ತದೆ. |
| ಆ | ಈ ಜಲಾಶಯಕ್ಕೆ ಹೂಳು ಎತ್ತಲು ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; | ಈ ಜಲಾಶಯದಲ್ಲಿ ಹೂಳು ಎತ್ತಲು ಸುಮಾರು ರೂ.20.65 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. |
| ಇ | ಈ ಜಲಾಶಯದಲ್ಲಿ ನೀರು ಖಾಲಿ ಮಾಡಿರುವುದರಿಂದ, ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಂತರ್ಜಲ ಕುಸಿದು ರೈತರು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಈ ಜಲಾಶಯದಲ್ಲಿ ಪೂರ್ಣ ಪ್ರಮಾಣದಲ್ಲಿ ನೀರನ್ನು ಖಾಲಿ ಮಾಡಿರುವುದಿಲ್ಲ. ಕನಿಷ್ಠ 30 ಅಡಿ (0.855 ಟಿ.ಎಂ.ಸಿ) ನೀರನ್ನು ಜಲಾಶಯದಲ್ಲಿ ಶೇಖರಿಸಿ (ಕಾಯ್ದಿರಿಸಿಕೊಂಡು) Hydraulic Dredging ತಂತ್ರಜ್ಞಾನವನ್ನು ಬಳಸಿ ಹೂಳನ್ನು ತೆಗೆಯಲಾಗಿರುತ್ತದೆ. |
| ಈ | ಈ ಜಲಾಶಯದ ಹೂಳೆತ್ತುವ ಕೆಲಸವನ್ನು ಯಾವಾಗ ಪೂರ್ಣಗೊಳಿಸಲಾಗುವುದು ಮತ್ತು ಈ ಜಲಾಶಯಕ್ಕೆ ಯಾವಾಗ ನೀರು ತುಂಬಿಸಲಾಗುವುದು? (ವಿವರಣೆ ನೀಡುವುದು) | ಜಲಾಶಯದ ಹೂಳೆತ್ತುವ ಕೆಲಸವನ್ನು ಈಗಾಗಲೇ ಪೂರ್ಣಗೊಳಿಸಲಾಗಿದ್ದು, ಎತ್ತಿನಹೊಳೆ ಯೋಜನೆ ಪೂರ್ಣಗೊಂಡ ನಂತರ ಹಂಚಿಕೆಯಾಗಿರುವ 1.70 ಟಿ.ಎಂ.ಸಿ ನೀರನ್ನು ತುಂಬಿಸಲಾಗುವುದು. |

ಸಂಖ್ಯೆ: ನಅಇ 41 ಎಂಎನ್ಐ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ